is A type and another is B type ; for A fire station, non-recurring expenditure is :

Cost of fire station building	...	Rs. 80,000
Staff quarters	...	Rs. 2,00,000
Static water tank	...	Rs. 5,000
Cost of equipment and appliances.		Rs. 1,80,000
		4,65,000

Recurring expenditure is :

Pay and allowances, cost of uniforms and contingencies. 70,000

So, in all for A Class fire service Station, the expenditure is Rs. 5,35,000.

For B type fire Station :

Cost of fire station building	...	Rs. 60,000
Equipment and appliances	...	80,000
Staff quarters	...	1,25,000
Total recurring expenditure	...	2,65,000

Recurring expenditure :

Pay and allowances, etc.	...	40,500

In all it comes to Rs. 3,05,500.

ಶ್ರೀ ಎಲ್. ಶ್ರೀಕಂಠಯ್ಯ.—ಇದರಲ್ಲಿ 'ಎ' ಕ್ಲಾಸ್ ಮತ್ತು 'ಬಿ' ಕ್ಲಾಸ್ ಎಂದು ಹೇಳಿದಿರಿ. ಮೂಡಬಿದ್ರೆ ಟೌನ್‌ಗೆ 20 ಸಾವಿರ ಜನ ಪಾಪುಲೇಷನ್‌ಗೆ 'ಸಿ' ಕ್ಲಾಸ್ ಮಾಡಿ ಸ್ವಲ್ಪಮಟ್ಟಿಗೆ 10 ಸಾವಿರ ರೂಪಾಯಿಯಾಗಲೀ ಅಥವಾ 50 ಸಾವಿರ ರೂಪಾಯಿಯಾಗಲಿ ಏತಕ್ಕೆ ಖರ್ಚು ಮಾಡಬಾರದು ? ಮಂಗಳೂರು ಟೌನ್‌ಗೆ 22 ಮೈಲಿ ದೂರವಿರುವುದರಿಂದ ಈ ಊರನ್ನು 3ನೇ ಕ್ಲಾಸ್ ಮಾಡಿ ಏತಕ್ಕೆ ಅನುಕೂಲಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದುದನ್ನು ವಿಚಾರ ಮಾಡಿದ್ದೇನೆ. ಇದು ದೊಡ್ಡ ದೊಡ್ಡ ಪಟ್ಟಣಗಳಿಗೆ ಸಾಧ್ಯವಾಗುತ್ತದೆ. ಸಣ್ಣ ಸಣ್ಣ ಪಟ್ಟಣಗಳಿಗಾಗಲಿ, ಟೌನ್‌ಗಳಿಗಾಗಲಿ, ದೊಡ್ಡ ದೊಡ್ಡ ಪಂಚಾಯಿತಿಗಳಿಗಾಗಲಿ ಇದು ಸಾಧ್ಯವಿಲ್ಲ. ಅದಕ್ಕೋಸ್ಕರ ಬೆಂಗಳೂರಿನಲ್ಲಿ ಲೋಕಲ್ ಫರ್ಕ್ ಪೋರ್ಟಬಲ್ ಫೈರ್ ಫೈಟಿಂಗ್ ಪಂಪ್ಸ್‌ನ್ನು ತಯಾರು ಮಾಡಿದ್ದಾರೆ. ಅದು ಅಷ್ಟೊಂದು ಖರ್ಚಾಗುವುದಿಲ್ಲ. ಇದರಿಂದ ಅನುಕೂಲವಾಗುತ್ತದೆ. ಎಂಪ್ಲಾಯೀಸ್ ಪೇಪ್ಯೂಟೇ ಕಮಿಷನರುಗಳಿಗೂ ಬರೆದಿದ್ದೇವೆ. ಪಂಚಾಯಿತಿಯವರೂ ಮತ್ತು ಸಣ್ಣ ಸಣ್ಣ ಮುನಿಸಿಪಾಲಿಟಿಯವರು ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿದ್ದರೆ ಅವರಿಗೆ ತೆಗೆದುಕೊಳ್ಳುವುದಕ್ಕೆ ಪರ್ಸೂ ಮಾಡಬೇಕು ಎಂದು ಹೇಳಿದ್ದೇವೆ. ಬಹುಶಃ ಪೋರ್ಟಬರ್ ಫೈರ್ ಪಂಪ್ಸ್ ಬೇಕಾಗಿದ್ದರೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರೆ ಏನಾದರೂ ಮಾಡಬಹುದು.

Missing of Sugar Consignment

25. Sri L. SRIKANTAIAH (Nanjangud).—

Will the Chief Minister be pleased to state :—

(a) whether Messrs. Appakutty, wholesale Merchants, Big Bazar, Calicut, lodged a complaint with the police at Hospet on 28th

(SRI L. SRIKANTAIAH)

August 1967 that 80 bags of allotted sugar that were leaded to the lorry No. 4855 with instruction to deliver the consignment to M/s. Karala Transport, Mysore are missing along with the lorry since 11th August 1967 ;

(*b*) whether the I.G.P., the D.C. of Bellary, the D.S.P., Mysore and the Hon'ble Minister for Food and Civil Supplies were informed of this by the District Collector of Kozhikode and urged to take action ;

(*c*) whether the culprits and the lorry have been traced ;

(*d*) whether the said consignment of 80 bags of sugar has been sold to Satyamurthy Prabhakar Industries, New Tharagupet, Bangalore by a lorry owner ;

(*e*) the stage at which the enquiry is pending ?

A.— Sri VEERENDRA PATIL (Chief Minister).—

(*a*) Yes.

(*b*) A telegram was received from the District Collector, Kozhikode.

(*c*) Two out of five accused persons and the lorry have been traced.

(*d*) Yes.

(*e*) The case is pending trail.

ಶ್ರೀ ಎಚ್. ಶ್ರೀಕಂಠಯ್ಯ.—(ಈ) ಪ್ರಶ್ನೆಗೆ ''ಹೌದು'', ಎಂದು ಹೇಳಿದ್ದೀರಿ. ಈ 80 ಮೂಟೆ ಸಕ್ಕರೆಯನ್ನು ಪ್ರಭಾಕರ್ ಇಂಡಸ್ಟ್ರೀಸ್‌ನವರಿಗೆ ಯಾರು ಯಾವ ತಾರೀಕಿಗೆ ಮಾರಿರುತ್ತಾರೆ ಎಂದು ಗೊತ್ತಿದೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಬೆಂಗಳೂರಿಗೆ 12ನೇ ಆಗಸ್ಟ್ 1967 ಕ್ಕೆ ತೆಗೆದು ಕೊಂಡು ಬಂದಿದ್ದಾರೆ. ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿ ಯಾರೋ ಬ್ರೋಕರ್ಸ್ ನಂಬಂಧ ಬೆಳೆಸಿ ಪ್ರಭಾಕರ್ ಇಂಡಸ್ಟ್ರೀಸ್‌ನ ಸತ್ಯಮೂರ್ತಿಯವರಿಗೆ 80 ಬ್ಯಾಗುಗಳನ್ನು ಮಾರಿದ್ದಾರೆ. ಒಂದು ಮೂಟೆಗೆ 276 ರೂಪಾಯಿನಂತೆ ಮಾರಿದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಯಾವ ತಾರೀಖು, ಸ್ವಾಮಿ ಅದು ?

ಶ್ರೀ ವೀರೇಂದ್ರ ಪಾಟೀಲ್.—12ನೇ ಆಗಸ್ಟ್, 67 ರಂದು ಬೆಂಗಳೂರಿಗೆ ತಂದಿದ್ದಾರೆ. ಬಹುಶಃ ಮೂರು ದಿನವೋ, ಒಂದೆರಡು ದಿವಸ ಬಿಟ್ಟೋ ಮಾರಿದ್ದಾರೆಂದು ಕಾಣುತ್ತದೆ.

ಶ್ರೀ ಎಲ್ ಶ್ರೀಕಂಠಯ್ಯ.—ತಾವು ಅಪರಾಧಿಗಳನ್ನು, ರಾರಿಯನ್ನು ಯಾವ ತಾರೀಕಿನಂದು ಹಿಡಿದಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅಪರಾಧಿಗಳನ್ನು ಎಲ್ಲರನ್ನೂ ಹಿಡಿಯಲಕ್ಕೆ ಆಗಲಿಲ್ಲ. ಇಬ್ಬರನ್ನು ಮಾತ್ರ ಹಿಡಿದಿದ್ದಾರೆ. ಯಾವ ತಾರೀಕಿನಂದು ಎಂದು ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಎಚ್. ಶ್ರೀಕಂಠಯ್ಯ.—ಅಪರಾಧಿಗಳು ಗೊತ್ತು ಇದ್ದರೂ, ಕೂಡ ಇನ್‌ವೆಸ್ಟಿಗೇಶನ್ ಕೊಲ್ಯೂಜನ್‌ನಿಂದ ಅಪರಾಧಿಗಳನ್ನು ಹಿಡಿಯುವುದಕ್ಕೆ ತಡವಾಯಿತೇ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ರೇಟ್ ಆಗಿಲ್ಲ. ನಮಗೆ ವರ್ತಮಾನ ಬಂದ ತಕ್ಷಣ ನಾವು ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಕೆಲವರು ಸಿಕ್ಕಿದ್ದಾರೆ, ಕೆಲವರು ಸಿಕ್ಕಲಲ್ಲ. ನಮಗೆ 24 ಆಗಸ್ಟ್ 67ಕ್ಕೆ ವರ್ತಮಾನ ಬಂತು. ಕೇಸ್ ಕೂಡಲೇ ರಿಜಿಸ್ಟರ್ ಮಾಡಿದ್ದೇವೆ. ಆದಾದ ಮೇಲೆ ಚಾರ್ಜ್‌ಷೀಟ್ ಹಾಕಿದ್ದೇವೆ. ಕೇಸ್ ಈಗ ಸಬ್‌ಜುಡಿಸ್ ಇದೆ.